ನಾನು ನಂಬಲಿಲ್ಲ. ಒಂದಲ್ಲಾ ಒಂದುದಿನ ನೀವು ಪ್ರಕಟಗೊಳ್ಳುವಿರೆಂಬ ಆಶಾಭಾವದಿಂದ ಸ್ವಯಂವರಕ್ಕೆ ಅಣ್ಣ ಬಲರಾಮನೊಡನೆ ಬಂದೆ. ನನ್ನಾಸೆ ಹುಸಿಯಾಗಲಿಲ್ಲ.'

'ಕೃಷ್ಣ, ಆಪದ್ಬಾಂಧವನಂತೆ ಬಂದಿದ್ದೀ. ಮೈಮರೆತು ಮಲಗಿದ್ದವಳು ಅರ್ಧ ನಿದ್ರಾವಸ್ಥೆಯಲ್ಲಿ ನುಡಿದ ನನ್ನ ಅಭಾಸದ ನುಡಿಗಳನ್ನು ನೀನೀಗಲೇ ಕೇಳಿದ್ದೀಯ. ನಾನೀಗೇನು ಮಾಡಲಿ?' ಕುಂತೀ ಕೈ ಕೈ ಹಿಸುಕಿಕೊಳ್ಳುತ್ತಾ ಕೇಳಿದಳು.

'ಮಾಡುವುದೇನನ್ನು? ಐವರೂ ಪಾಂಚಾಲಿಯನ್ನು ವರಿಸುವುದಷ್ಟೇ. ನಿನ್ನ ಮಕ್ಕಳು ಅಪ್ರತಿಮ ವೀರರು ಹಾಗೂ ಧರ್ಮಾತ್ಮರು. ಮುಂದೆಯೂ ಅವರೀಗಿರುವಂತೆಯೇ ಒಮ್ಮತದಿಂದಿದ್ದರೆ ಆರ್ಯಾವರ್ತದ ಯಾವ ಶಕ್ತಿಯೂ ಅವರನ್ನು ಮಣಿಸಲಾರದು. ಅವರಲ್ಲಿ ಐಕ್ಯತೆ ಮುಂದುವರೆಯಬೇಕೆಂದರೆ ಅವರು ಪಾಂಚಾಲಿಯನ್ನು ವರಿಸಲೇಬೇಕು.'

ಈ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಹೊರಗಿದ್ದ ಹಿರಿಯನೊಬ್ಬ ಒಳಬಂದು ಉದ್ದುದ್ದವಾಗಿದ್ದ ನೆರಳುಗಳಲ್ಲಿ ತನ್ನದನ್ನೂ ಒಂದಾಗಿಸಿದ. ' ಕೃಷ್ಣ, ನಿಮ್ಮ ನಿಮ್ಮ ಕಾರಣಗಳೇನೇ ಇರಲಿ. ನಿಮ್ಮಗಳ ರಾಜ್ಯ ದಾಹಕ್ಕೆ ನನ್ನ ಮಗಳನ್ನು ಬಲಿಕೊಡಲಾರೆ' ಎಂದ ದೃಢವಾದ ಧ್ವನಿಯಲ್ಲಿ. ಮಹಾರಾಜ ದ್ರುಪದನನ್ನು ಕಂಡು ಪಾಂಡವರು ಹಾಗೂ ಕುಂತಿದೇವಿ ಕೈ ಮುಗಿದು ತಮ್ಮ ಗೌರವ ಸೂಚಿಸಿದರು.

'ನನ್ನ ಪಾಂಚಾಲಿಯನ್ನು ಕೇವಲ ಅರ್ಜುನ ವರಿಸಿದ್ದಾನೆ. ಅಷ್ಟೂ ಮಂದಿ ಹಂಚಿಕೊಳ್ಳಲು ಅವಳೇನು ಪದಾರ್ಥವೇ? ಒಬ್ಬನಿಗಿಂತ ಹೆಚ್ಚು ಪತಿಗಳನ್ನು ಹೊಂದುವುದು ಅನೀತಿ ಹಾಗೂ ಅಧರ್ಮ'

'ರಾಜನ್, ನಿನಗೆಷ್ಟು ಮಂದಿ ಪತ್ನಿಯರಿದ್ದಾರೆ?' ಕೃಷ್ಣನ ನೇರ ಪ್ರಶ್ನೆಗೆ ದ್ರುಪದ ಅವಾಕ್ಕಾದ! ಅಸಮಾಧಾನ ಭುಗಿಲೆದ್ದಿತು.

'ರಾಜಧರ್ಮಕ್ಕೆ ಅನುಗುಣವಾಗಿ ನನಗೆ ಬಹು ಭಾರ್ಯೆಯರಿದ್ದಾರೆ. ನಾನು ಅವರೆಲ್ಲರನ್ನೂ ಧಾರ್ಮಿಕ ವಿಧಿಗಳಿಗೆ ಅನುಸಾರವಾಗಿ ವರಿಸಿದ್ದೇನೆ. ನಾನೊಬ್ಬನೇ ಅಲ್ಲ. ನೀನೂ ಅಷ್ಟಮಹಿಷಿಯರ ಪತಿ. ನೆನಪಿರಲಿ.'

'ಅದಕ್ಕಾಗಿಯೇ ಈ ಪ್ರಶ್ನೆ. ಪುರುಷರ ಬಹುಪತ್ನಿತ್ವ ಅಧರ್ಮವಲ್ಲದಿದ್ದರೆ ಸ್ತ್ರೀಯ ಬಹು ಪತಿತ್ವ ಅಧರ್ಮ ಹೇಗಾದೀತು? ಧರ್ಮ ಎಲ್ಲರಿಗೂ ಒಂದೇ ಅಲ್ಲವೇ? ನೀನು ಸ್ತ್ರೀಧರ್ಮ ಬೇರೆ ಅನ್ನುವುದಾದರೂ ಸಂದರ್ಭ ಸೂಕ್ಷ್ಮತೆಗನು ಸಾರವಾಗಿ 'ಆಪದ್ಧರ್ಮ'ವೆಂಬುದು ಧರ್ಮಸಮ್ಮತ ಎನ್ನುತ್ತದೆ ಶಾಸ್ತ್ರ. ಈಗ ಇವರಿಗೆ ಅಂತಹದೊಂದು ಆಪತ್ತು ಕಾಯುತ್ತಿದೆ. ಪಾಂಡು ಪುತ್ರರನ್ನು ನಾಶ ಮಾಡಲು ಕೌರರು ನಾನಾ ವ್ಯೂಹ ರಚಿಸುತ್ತಿದ್ದಾರೆ. ಶಕುನಿ ಅವರ ದ್ವೇಷಾಗ್ನಿಗೆ ತುಪ್ಪ ಸುರಿಯುತ್ತಿದ್ದಾನೆ. ಕರ್ಣನ ಬಾಹುಬಲ ಅವರ ನೆರವಿಗಿದೆ. ಸಾಮಂತ ರಾಜರೂ ಬೆಂಬಲಿಸುತ್ತಿದ್ದಾರೆ. ಇಂತಹ ವೇಳೆಯಲ್ಲಿ ಈ ಸಹೋದರರನ್ನು ಒಂದುಗೂಡಿಸಿ ಬಲಪಡಿಸಿ ಕ್ಷಾತ್ರತೆ ತುಂಬಲು ಪಾಂಚಾಲಿ ಇವರೆಲ್ಲರ ಭಾರ್ಯೆಯಾಗಲೇ ಬೇಕು. ಮಹಾರಾಜ, ಈ ವಿವಾಹದಲ್ಲಿ ಕೇವಲ ಪಾಂಡವರದಷ್ಟೇ ಅಲ್ಲ ನಿನ್ನ ಒಳಿತೂ ಇದರಲ್ಲಡಗಿದೆ.'



'ನನ್ನ ಒಳಿತಿರುವುದು ನನ್ನ ಮಗಳ ಸುಖ ಸಂತೋಷದಲ್ಲಿ..'

'ಹೌದೇ? ಹಿಂದೊಮ್ಮೆ ದ್ರೋಣ ನಿನ್ನನ್ನವಮಾನಿಸಿದಾಗ ನೀ ಮಾಡಿದ್ದ ಪ್ರತಿಜ್ಞೆ ಮರೆತೆಯಾ? ಈವರೆಗೆ ಆ ಪ್ರತಿಜ್ಞೆ ಪ್ರತಿಜ್ಞೆಯಾಗಿಯೇ ಉಳಿದಿದೆ ಯಲ್ಲಾ. ಕಾರಣವೇನೆಂದು ಯೋಚಿಸಿರುವೆಯಾ? ಆ ದ್ರೋಣ ಕೌರವರ ರಕ್ಷಣೆಯಲ್ಲಿ ಇರುವುದರಿಂದ ತಾನೇ? ಈ ಪಾಂಡವ ವೀರರು ನಿನ್ನ ಅಳಿಯಂದಿರಾಗಿ ನಿನ್ನ ಪರವಿದ್ದರೆ ದ್ರೋಣನ ನಾಶ ಹೆಚ್ಚು ದೂರವಿಲ್ಲ' ಕೃಷ್ಣನ ಈ ಮಾತುಗಳು ಅವನನ್ನು ಯೋಚಿಸುವಂತೆ ಮಾಡಿತು.

ಎಲ್ಲರ ಮಾತುಗಳನ್ನು ಹೊರಗಿನಿಂದಲೇ ಕೇಳಿಸಿಕೊಳ್ಳುತ್ತಿದ್ದ ಪಾಂಚಾಲಿಯ ಹಿರಿಯಣ್ಣ ಧೃಷ್ಟದ್ಯುಮ್ನ ಒಳಬಂದ.

'ಎಲ್ಲರೂ ಅವರವರ ಸ್ವಾರ್ಥಕ್ಕೆ ತಕ್ಕಂತೆ ಯೋಚಿಸುತ್ತೀರಲ್ಲದೆ ಪಾಂಚಾಲಿ ಯ ಅಭಿಪ್ರಾಯವೇನೆಂದು ಕೇಳಿದ್ದೀರಾ? ಐವರು ಪತಿಗಳೊಡನೆ ದಾಂಪತ್ಯ ನಡೆಸಲು ಅವಳೊಪ್ಪುತ್ತಾಳಾ ಕೇಳಿ. ಅವಳಿಚ್ಛೆಗೆ ವಿರೋಧವಾಗಿ ನಡೆಯಲು ನಾನೊಪ್ಪಲಾರೆ. ಇದಕ್ಕಾಗಿ ನಾನು ಪ್ರಾಣ ಒತ್ತೆಯಿಟ್ಟಾದರೂ ಸರಿ. ನನ್ನ ತಂಗಿಯ ಸ್ವಾತಂತ್ರ್ಯ ಕಾಪಾಡುತ್ತೇನೆ' ಎಂದು ಗುಡುಗಿದ.

ಕೆರಳಿದ ಧೃಷ್ಟದ್ಯುಮ್ನನನ್ನು ಕೃಷ್ಣ ಸಂತೈಸಿದ. 'ಹಿರಿಯಣ್ಣನಾಗಿ ನೀನಾಡಿದ ಮಾತು ಸತ್ಯ. ಈ ಕೆಲಸವನ್ನು ನಾನು ಮೊದಲೇ ಮಾಡಬೇಕಿತ್ತು. ಪಾಂಚಾಲಿ, ನನ್ನನ್ನು ಕ್ಷಮಿಸಿ ಬಿಡು ತಂಗಿ. ನನ್ನನ್ನೂ ನಿನ್ನ ಒಡಹುಟ್ಟಿದ ಸಹೋದರನೆಂದೇ ಭಾವಿಸು. ನಿನ್ನನ್ನು ಗಣನೆಗೇ ತೆಗೆದುಕೊಳ್ಳದೆ ನಿನ್ನ ಜೀವನದೊಂದಿಗೆ ಆಟ ವಾಡಲು ಹೊರಟಿದ್ದೆವು. ಅಂತಿಮ ನಿರ್ಧಾರ ನಿನ್ನದು. ಸ್ವಯಂವರದಲ್ಲಿ ತನ್ನ ಅಪ್ರತಿಮ ಕೌಶಲ್ಯ ತೋರಿ ನಿನ್ನನ್ನು ಜಯಿಸಿದ ಅರ್ಜುನನೊಬ್ಬನ ವಧುವಾಗುವೆಯೋ ಅಥವಾ ಮಾತೃವಾಕ್ಯಕ್ಕೆ ಕಟ್ಟು ಬಿದ್ದಿರುವ ಪಾಂಡವರೆಲ್ಲರನ್ನೂ ವರಿಸುವೆಯೋ?'

ಈವರೆಗೆ ಎಲ್ಲರ ಮಾತುಗಳನ್ನೂ ಕೇಳಿಸಿಕೊಳ್ಳುತ್ತಿದ್ದವಳು ನಿಂತಲ್ಲೇ ನಡುಗಿದಳು. ಎಲ್ಲರ ದೃಷ್ಟಿಯೂ ಅವಳ ಮೇಲೆಯೇ. ಬಲು ದೊಡ್ಡ ಭಾರ ಹೊತ್ತವಳಂತೆ ಕುಸಿದು ಕುಳಿತಳು.ತನ್ನ ನಿರ್ಧಾರ ತನ್ನೊಬ್ಬಳದೇ ಅಲ್ಲದೆ ಪಾಂಡವರ ಸಹೋದರರ ಅಳಿವು ಉಳಿವು ಮತ್ತು ತಂದೆಯವರ ಪ್ರತಿಜ್ಞಾ ಪೂರೈಕೆಯನ್ನೂ ನಿರ್ಧರಿಸುವುದಂತೆ. ಇಷ್ಟೊಂದು ಗುರುತರವಾದ ಜವಾಬ್ದಾರಿ ತನ್ನಿಂದ ಹೊರಲಾಗುವುದೇ? ಐವರೊಡನೆ ದಾಂಪತ್ಯ ಜೀವನ ತನ್ನಿಂದ ಸಾಧ್ಯವೇ? ಇದು ಬ್ರಹ್ಮ ಬರೆದ ಬರಹ ಎಂದು ಒಪ್ಪಿಕೊಂಡು ಬಿಡಲೇ? ಒಮ್ಮೆ ಸಮ್ಮತಿ ನೀಡಿದಬಳಿಕ ಹಿಂದೆ ಹೋಗಲು ಸಾಧ್ಯವೇ ಇಲ್ಲದ ಪರಿಸ್ಥಿತಿ. ನನ್ನಂತೆಯೇ ಪಾಂಡವರ ಮನಸ್ಸಿನಲ್ಲಿಯೂ ತುಮುಲ ನಡೆಯುತ್ತಿದೆಯೇ? ತಿಳಿದುಕೊಳ್ಳಲು ಜ್ಯೇಷ್ಠ ಯುಧಿಷ್ಠಿರನತ್ತ ನೋಡಿದಳು.

ಶಾಂತಮೂರ್ತಿ, ಋಜು ಸ್ವಭಾವದ ಧರ್ಮಭೀರು. ಅವನಿಗಿದ್ದ ಧರ್ಮದ ಗೀಳಿನಿಂದಾಗಿ ಜನರ ಬಾಯಿಯಲ್ಲಿ ಧರ್ಮರಾಜನೇ ಆಗಿಬಿಟ್ಟಿದ್ದ. ಬ್ರಹ್ಮಚಾರಿ ಯಾಗಿ ಹೆಣ್ಣನ್ನು ಕಣ್ಣೆತ್ತಿ ನೋಡದವ ತಾಯಿಯ ಮಾತಿನಿಂದ ನನ್ನ ಮೇಲಿನ ಕಾಮನೆ ಧರ್ಮಸಮ್ಮತವೆನಿಸಿ ಆಸೆಯಿಂದ ನೋಡುತ್ತಿದ್ದಾನೆ!

ಭೀಮನತ್ತ ದೃಷ್ಟಿ ಹಾಯಿಸಿದಳು. ಸುಂದರ ವದನ, ದೈತ್ಯದೇಹಿ. ಅರಣ್ಯವಾಸದಲ್ಲಿದ್ದಾಗ ರಕ್ಕಸಿಯೊಬ್ಬಳೊಡನೆ ದಾಂಪತ್ಯ ನಡೆಸಿದವನು. ಹುಟ್ಟಾ ರಸಿಕನಿರಬೇಕು. ಈಗ ತನ್ನತ್ತಲೇ ಅನುರಾಗದಿಂದ ನೋಡುತ್ತಿದ್ದಾನೆ. ಒಪ್ಪಿಕೊಂಡು ಬಿಡು. ನಿನ್ನನ್ನು ನನ್ನ ಹೃದಯದ ರಾಣಿಯಾಗಿ ಮೆರೆಸುವೆ ಎನ್ನುವಂತಿದೆ ಅವನ ಮುಖಭಾವ. ಅವಳ ಮೈ ಜುಂ ಎಂದಿತು. ದೃಷ್ಟಿ ಮೂರನೆಯವನತ್ತ ಸಾಗಿತು. ಹಿರಿಯರಿಬ್ಬರಲ್ಲಿದ್ದ ಒಪ್ಪುವಳೋ ಇಲ್ಲವೋ ಎಂಬ ಆತಂಕದ ಛಾಯೆ ಅರ್ಜುನನಲ್ಲಿರಲಿಲ್ಲ. ನೀನೇನೇ ನಿರ್ಧಾರ ಮಾಡಿದರೂ ನನ್ನ ಕೈಯಿಂದಂತೂ ತಪ್ಪಿ ಹೋಗುವಳಲ್ಲ. ನಾ ಗಳಿಸಿದ ನಿಧಿ ನೀನು. ಹೃದಯದಲ್ಲಿಟ್ಟು ಆರಾಧಿಸುವೆ. ಬೇಗ ನನ್ನವಳಾಗು ಬಾ ಎಂಬ ಆಹ್ವಾನದ ನೋಟದಿಂದ ಪುಳಕಿತೆಯಾದಳು.

ಪಕ್ಕದಲ್ಲಿದ್ದುದು ನಕುಲ ಸಹದೇವರು. ಅಶ್ವಿನೀ ದೇವತೆಗಳಂತೆ ಅತಿ ರೂಪವಂತರು. ಕುಂತಿಯ ನೆಚ್ಚಿನ ಮಕ್ಕಳಂತೆ. ಅಣ್ಣಂದಿರನ್ನು ನೆರಳಿನಂತೆ ಅನುಸರಿಸುವರು. ನಾನು ಒಪ್ಪುವೆನೋ ಇಲ್ಲವೋ ಎಂಬ ಕಾತುರ ಮುಖದಲ್ಲಿ ಸ್ಪಷ್ಟವಾಗಿದೆ. ಅವರ ಆಸೆಯ ನೋಟ ಅವಳ ಮೇಲೆರಗಿ ರೋಮಾಂಚನ ಗೊಂಡಳು.

ಈವರೆಗೆ ಗುಪ್ತವಾಗಿದ್ದ ಹೆಣ್ತನ ಮೇಲೆದ್ದು ಮೆರೆಯಿತು. ಹೃದಯ ಅರಳಿ ಹಾಡತೊಡಗಿತು. ಅವರೆಲ್ಲರ ಮೇಲಿನ ಅನುರಾಗ ಹುಚ್ಚೆದ್ದು ಕುಣಿಯಿತು. ತೀವ್ರ ಆಕರ್ಷಣೆಗೆ ಒಳಗಾಗಿ ಪುಳಕಗೊಂಡಳು. ಪ್ರೇಮಪಾಶದಲ್ಲಿ ಬಂಧಿಯಾಗಿದ್ದ ಮನಸ್ಸು ಕೂಗಿ ಹೇಳಿತು. ನನಗೈವರೂ ಬೇಕು. ಅವರಿಲ್ಲದೆ ನಾನು ಬಾಳಲಾರೆ. ಪ್ರೇಮದ ಹುಚ್ಚಿನಲ್ಲೂ ಮನಸ್ಸಿನ ಮೂಲೆಯಲ್ಲಿ ಅಡಗಿದ್ದ ವಿವೇಕ ಎಚ್ಚರಿಸಿತು. ತನಗಾಗಿ ಸಹೋದರರಲ್ಲಿ ಅಸೂಯೆ ತಲೆ ಎತ್ತಿ ಒಡಕುಂಟಾದರೆ? ಅದನ್ನು ತಡೆಯಲು ತನ್ನಿಂದಾದೀತೇ? ಭಯದಿಂದ ಕಂಪಿಸುತ್ತಲೇ ಅಲ್ಲಿದ್ದ ಒಂದೇ ಒಂದು ಹೆಣ್ಣು ಜೀವ ಕುಂತಿಯತ್ತ ನೋಡಿ ದಳು. ಜೀವನದಲ್ಲಿ ನಾನು ಕಾಣದ್ದೇನಿದೆ? ಎಲ್ಲ ಕಷ್ಟಗಳನ್ನೂ ಕಂಡರಗಿಸಿ ಕೊಂಡವಳು. ಏನೇ ಬಂದರೂ ನಿನ್ನ ಬೆನ್ನಿಗೆ ನಾನಿದ್ದೇನೆ ಎನ್ನುವ ಭರವಸೆಯ ನೋಟ ಅವಳ ಭಯ ನೀಗಿಸಿತು. ಮೇಲೆದ್ದು ಕುಂತಿಯ ಮುಂದೆ ನಿಂತಳು.

'ತಾಯೀ, ನಿನ್ನ ಐವರು ಪುತ್ರರ ವಧು ಪಾಂಚಾಲಿ ಕಾಲಿಗೆರಗುತ್ತಿದ್ದೇನೆ' ಎಂದಳು ಎಲ್ಲರಿಗೂ ಕೇಳುವಂತೆ ದೃಢವಾದ ಧ್ವನಿಯಲ್ಲಿ. ಅಂದು ಕಾಂಪಿಲ್ಯಪುರಿಯ ಕುಂಬಾರ ಕೇರಿಯಲ್ಲಿ ಪಾಂಚಜನ್ಯ ಮೊಳಗಿತು. ಅದೇ ಮುಂದೆ ನಡೆಯಲಿದ್ದ ಧರ್ಮಯುದ್ಧದಲ್ಲಿ ಮೊಳಗಲಿದ್ದ ಶಂಖಧ್ವನಿಗೆ ನಾಂದಿಯಾಯಿತು.